# ಮಾತು–ಕೃತಿ: ಮಕ್ಕಳಿಗಿಲ್ಲ ವ್ಯತ್ಯಾಸ!



**ಮಕ್ಕಳ ನಡವಳಿಕೆಯ ಮೇಲೆ ಪೋಷಕರು ಎಷ್ಟೇ ಕಡಿವಾಣ ಹಾಕಿದರೂ, ಎಳೆಯರ ಮನಸ್ಸಿನ ಸ್ವತಂತ್ರ ಅಭಿವ್ಯಕ್ತಿ ಚಿಗುರೊಡೆಯುತ್ತಲೇ ಇರುತ್ತದೆ.**

■ ಸ್ವಯಂಪ್ರಭಾ

ಸಾಮಾನ್ಯವಾಗಿ ದೊಡ್ಡವರು ಸದಾ ಸುಪೀರಿಯಾರಿಟಿ ಕಾಂಪ್ಲೆಕ್ಸ್ ಅಥವಾ ಮೇಲರಿಮೆಯಲ್ಲಿಯೇ ಇರುತ್ತಾರೇನೋ ಎಂದು ಅನಿಸುತ್ತಿದೆ. ‘ಪಾಪ, ಮಕ್ಕಳ ಕೈಲಾಗಲ್ಲ’ ಎಂದು ಸಂಜೆ ವೇಳೆ ಅವರ ಸ್ಕೂಲ್ ಬ್ಯಾಗು ತಮ್ಮ ಹೆಗಲಿಗೇರಿಸಿಕೊಳ್ಳುತ್ತಾರೆ. ‘ಮಕ್ಕಳಿಗೆ ಕಷ್ಟವಾಗುತ್ತೆ’ ಎಂದು ಶಾಲೆಯ ಅಂಗಳದವರೆಗೆ ಅವರನ್ನು ಬಿಟ್ಟುಬರುತ್ತಾರೆ. ‘ಮಕ್ಕಳಿಗೆ ಇದೆಲ್ಲ ಹೇಗೆ ಅರ್ಥವಾಗಬೇಕು...’ ಎಂದು ರಿಯಾಯಿತಿಯ ದೊಡ್ಡ ಸರಮಾಲೆಯನ್ನೇ ಕೊಡುವುದಕ್ಕೆ ಹಿರಿಯರು ಮುಂದಾಗುತ್ತಾರೆ. ಹೀಗೆಲ್ಲ ಮಾಡುವ ಮೂಲಕ ತಾವು ದೊಡ್ಡವರೆಂದು ಸಾಬೀತು ಮಾಡಿಕೊಂಡು ಸಮಾಧಾನಪಟ್ಟುಕೊಳ್ಳುತ್ತಾರೇನೋ.

ವಾಸ್ತವವಾಗಿ ಮಕ್ಕಳು ಅಂತಹ ಹೆಚ್ಚಿನ ನಿರೀಕ್ಷೆಯಲ್ಲೇನೂ ಇರುವುದಿಲ್ಲ. ಪರಿಸ್ಥಿತಿಗೆ ತಕ್ಕಂತೆ ಪ್ರತಿಕ್ರಿಯಿಸುವುದು, ಸ್ವಾರ್ಥದ ಲೇಪವಿಲ್ಲದೆ, ಆದರೆ ಮನಸ್ಫೂರ್ತಿಯಾಗಿ ಬದುಕುವುದು ಅವರಿಗೆ ಸುಲಭ. ಉತ್ಸಾಹದ ಬುಗ್ಗೆಗಳಂತೆ ಇರುವ ವಿಚಾರವನ್ನು ಸ್ವೀಕರಿಸುವುದು ಅವರಿಗೆ ಚಿಕ್ಕಂದಿನಲ್ಲಿ ಸಹಜವಾಗಿಯೇ ಒಲಿದು ಬಂದಿರುತ್ತದೆ.

ಮಕ್ಕಳ ಮನಸ್ಸಿಗೆ ಸಂಬಂಧಿಸಿದ ಈ ವಿಚಾರ ನೆನಪಾಗಲಿಕ್ಕೆ ಕಾರಣ, ಇತ್ತೀಚೆಗೆ ಕೇರಳದಲ್ಲಿ ನಡೆದ ಫುಟ್‌ಬಾಲ್‌ಗೆ ಸಂಬಂಧಿಸಿದಂತೆ ಒಂದು ಘಟನೆ. ಆ ಹಿನ್ನೆಲೆಯಲ್ಲಿ ಮಕ್ಕಳ ನೇರವಂತಿಕೆ ಮನಸ್ಸಿಗೆ ತಟ್ಟುವಂತಾಯಿತು.

ಕೇರಳ ರಾಜ್ಯದ ಉತ್ತರ ಭಾಗದಲ್ಲಿ ಫುಟ್‌ಬಾಲ್ ಕುರಿತಂತೆ ಜನರಿಗೆ ಆಸಕ್ತಿ ಹೆಚ್ಚು. ತಾವು ಇಂಥವರ ಅಭಿಮಾನಿಯೆಂದು ಘೋಷಿಸಿಕೊಂಡು, ಚರ್ಚೆ, ಸಂವಾದ, ವಾದಗಳನ್ನು ನಡೆಸುವುದು ವಾಡಿಕೆ. ಅಪ್ಪ–ಅಮ್ಮನಿಗೆ ಈ ಆಸಕ್ತಿ ಇದೆಯೆಂದ ಮೇಲೆ ಮಕ್ಕಳಿಗೆ ಆಸಕ್ತಿ ಕುದುರದೇ ಇರುತ್ತದೆಯೇ? ಮಕ್ಕಳಿಗೂ ಫುಟ್‌ಬಾಲ್ ತಂಡದಲ್ಲಿರುವ ಆಟಗಾರರ ಅರಿವಿದೆ. ಅವರ ಪೂರ್ವಾಪರಗಳು ಗೊತ್ತಿವೆ. ಮಕ್ಕಳು ಫುಟ್‌ಬಾಲ್ ಆಟಗಾರರ ಅಭಿಮಾನಿಗಳಾಗಿ ಅವರನ್ನು ಎಷ್ಟರ ಮಟ್ಟಿಗೆ ಹಚ್ಚಿಕೊಂಡಿದ್ದಾರೆ ಎಂಬುದು ಮೊನ್ನೆ ನಡೆದ ಘಟನೆಯಿಂದ ಬಯಲಾಯಿತು.

ಮಲಪ್ಪುರಂ ಜಿಲ್ಲೆಯ ಪ್ರಾಥಮಿಕ ಶಾಲಾ ಪರೀಕ್ಷೆಯ ಪ್ರಶ್ನೆಪತ್ರಿಕೆಯಲ್ಲಿ ಅರ್ಜೆಂಟೈನಾದ ಫುಟ್‌ಬಾಲ್ ದಂತಕತೆಯೆಂದೇ ಪ್ರಸಿದ್ಧರಾದ ಲಯನೆಲ್ ಮೆಸ್ಸಿಯ ಜೀವನ ಚರಿತ್ರೆ ಕುರಿತು ಒಂದು ಪುಟದ ಉತ್ತರ ಬರೆಯುವಂತೆ ಪ್ರಶ್ನೆಯೊಂದನ್ನು ಸಿದ್ಧಪಡಿಸಲಾಗಿತ್ತು. ಅದಕ್ಕೆ ನಾಲ್ಕನೇ ಕ್ಲಾಸಿನ ಪುಟ್ಟಿಯೊಬ್ಬಳು ಹೀಗೆ ಉತ್ತರಿಸಿದ್ದಳು. ‘ನಾನು ಬ್ರೆಝಿಲ್ ಫುಟ್‌ಬಾಲ್ ತಂಡದ ಅಭಿಮಾನಿಯಾದ್ದರಿಂದ ಮೆಸ್ಸಿಯ ಕುರಿತು ಬರೆಯುವುದಿಲ್ಲ. ನನಗೆ ನೇಮರ್ ಎಂದರೆ ಬಹಳ ಇಷ್ಟ’ ಎಂದು ಖಡಕ್ ಆಗಿ ಉತ್ತರಿಸಿ, ಮುಂದಿನ ಪ್ರಶ್ನೆಯನ್ನು ಕೈಗೆತ್ತಿಕೊಂಡು ಉತ್ತರಿಸುತ್ತ ಸಾಗಿದ್ದಳು.

ಮತ್ತೊಂದು ಶಾಲೆಯ ವಿದ್ಯಾರ್ಥಿ ತನ್ನ ಅಭಿಮಾನವನ್ನು ಕೊಂಚ ನಿಯಂತ್ರಣದಲ್ಲಿಟ್ಟುಕೊಂಡರೂ, ಅವನ ಉತ್ತರ ಮಾತ್ರ ಭಿನ್ನವಾಗಿತ್ತು. ಆತ ಮೆಸ್ಸಿಯ ಜೀವನ ಚರಿತ್ರೆಯನ್ನು ನೀಟಾಗಿ ಒಂದು ಪುಟದಷ್ಟು ಬರೆದು, ಕೊನೆಗೆ ಪ್ರಶ್ನೆಪತ್ರಿಕೆ ತಿದ್ದುವ ಶಿಕ್ಷಕರಿಗೆ ಒಂದು ಸೂಚನೆಯನ್ನು ಉಲ್ಲೇಖಿಸಿದ್ದ. ‘ಮೆಸ್ಸಿಯ ಬಗ್ಗೆ ನೀವು ಕೊಟ್ಟ ಪ್ರಶ್ನೆಗೆ ನಾನು ಉತ್ತರ ಬರೆದಿದ್ದರೂ, ನಿಜವಾಗಿಯೂ ನಾನು ನೇಮರ್‌ನ ಅಭಿಮಾನಿಯಾಗಿದ್ದೇನೆ!’

ಇನ್ನೂ ಪ್ರಾಥಮಿಕ ತರಗತಿಗಳನ್ನೂ ದಾಟದ ಪುಟಾಣಿಗಳು ಹೀಗೆಲ್ಲಾ ಉತ್ತರ ಬರೆದರೆ ಪತ್ರಿಕೆ ತಿದ್ದುವ ಶಿಕ್ಷಕರಿಗೆ ನಗು ಬಾರದಿರುತ್ತದೆಯೇ. ನಕ್ಕು ಸುಸ್ತಾದ ಶಿಕ್ಷಕರು ಉತ್ತರ ಪತ್ರಿಕೆಯ ಫೋಟೊ ತೆಗೆದು ತಮ್ಮ ಶಾಲೆಯ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಹಂಚಿಕೊಂಡು ಸಹೋದ್ಯೋಗಿಗಳೊಂದಿಗೆ ಮಾತನಾಡಿ, ಈ ನಗುವನ್ನು ಮತ್ತಷ್ಟು ಹರಡಿದ್ದಾರೆ. ಆದರೆ ಈ ಫೋಟೊ ಅಷ್ಟಕ್ಕೇ ನಿಲ್ಲದೆ ಮಾಧ್ಯಮದವರೆಗೂ ತಲುಪಿಬಿಟ್ಟಿತು. ಈ ವಿಚಾರ ಕೇರಳದ ಶಿಕ್ಷಣ ಸಚಿವರಾದ ವಿ. ಸಿವನ್ ಕುಟ್ಟಿ ಅವರವರೆಗೆ ತಲುಪಿದ್ದು, ಅವರು ಈ ಕುರಿತ ವಿಚಾರಣೆಗೆ ಆದೇಶ ಹೊರಡಿಸಿದ್ದಾರೆ. ಅತ್ತ ಪುಟಾಣಿ ಮಕ್ಕಳ ಫುಟ್‌ಬಾಲ್ ಅಭಿಮಾನವನ್ನು ವ್ಯಕ್ತಪಡಿಸುವ ಈ ಮಲಯಾಳಂ ಭಾಷೆಯ ಉತ್ತರದ ಫೋಟೊ ಅಂತರ್ಜಾಲದಲ್ಲಿ ಮತ್ತಷ್ಟು ಚರ್ಚೆಗೆ ವಸ್ತುವಾಗಿದೆ.

ಅಮ್ಮಂದಿರು ಮನೆಯಲ್ಲಿ ಮಕ್ಕಳಿಗೆ ಟೀವಿ ನೋಡಲು ಅವಕಾಶ ಕೊಡದೇ, ಆಟವಾಡಲು, ಗೇಮ್ಸ್ ಆಡಲು ಅವಕಾಶ ಕೊಡದೇ ಪರೀಕ್ಷೆಗಾಗಿ ಅವರನ್ನು ಸಜ್ಜುಮಾಡುತ್ತಾರೆ. ಮಕ್ಕಳಿಗೆ ಪರೀಕ್ಷೆ ಇದೆಯೆಂದರೆ ಅಮ್ಮಂದಿರು ನೆಂಟರಿಷ್ಟರ ಮನೆಗೆ ಹೋಗುವುದನ್ನು, ಸಮಾರಂಭಗಳಲ್ಲಿ ಭಾಗವಹಿಸುವುದನ್ನೂ ತಪ್ಪಿಸಿ, ಮಕ್ಕಳು ಓದುವಂತೆ ನೋಡಿಕೊಳ್ಳುತ್ತಾರೆ. ಒಂದೊಂದು ಅಂಕವೂ ಅವರ ಕೈ ತಪ್ಪಿಹೋಗಬಾರದು ಎಂದು ಮಕ್ಕಳ ಬೊಗಸೆಯನ್ನು ಭದ್ರವಾಗಿಸಿ ಸಜ್ಜು ಮಾಡುತ್ತಾರೆ. ಆದರೆ ಮಕ್ಕಳು ಈ ಅಂಕಗಳಿಗಿಂತ ತನ್ನ ಇಷ್ಟಾನಿಷ್ಟವನ್ನು ಸ್ಪಷ್ಟವಾಗಿ ಹೇಳುವುದೇ ಮುಖ್ಯವೆಂದು ಬಗೆದು, ತಮ್ಮ ನೆಚ್ಚಿನ ಆಟಗಾರನ ಬಗ್ಗೆ ತಮ್ಮ ಅಭಿಮಾನವನ್ನು ಸ್ಪಷ್ಟವಾಗಿ ಉಲ್ಲೇಖಿಸುತ್ತಾರೆ. ಇದು ಎಷ್ಟರಮಟ್ಟಿಗೆ ಸರಿ–ತಪ್ಪು ಎಂಬುದು ಬೇರೆಯ ಮಾತು. ಆದರೆ ಮಕ್ಕಳ ನಿಷ್ಕಲ್ಮಷ ನಿಲುವುಗಳು ಎಷ್ಟೋ ಬಾರಿ ದೊಡ್ಡವರು ದಂಗು ಬಡಿಯುವಂತೆ ಇರುತ್ತದೆ.

ಪ್ರತಿಕ್ರಿಯಿಸಿ: feedback@sudha.co.in